ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯು ಮುಂದೆ ಮಂಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು).— ಲಿಖಿತ ಮೂಲಕ ಉತ್ತರಿಸುವ ಹತ್ತನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದಲ್ಲಿರುವ ಹತ್ತಿ ಗಿರಣಿಗಳ ಬಗ್ಗೆ.

೫೭೧. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕೈಗಾರಿಕಾ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಹತ್ತಿ ಗಿರಣಿಗಳ ಸಂಖ್ಯೆ ಎಷ್ಟು ?

ಆ) ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತಿ ಗಿರಣಿಯನ್ನು ತೆರೆಯಲು ಸಾರ್ವಜನಿಕರಲ್ಲಿಂದಾದರೂ ಮನವಿ ಬಂದಿದ್ದಾರೆಯೇ ?

ಇ) ಇದ್ದಲ್ಲಿ ಇವುಗಳು ಯಾವ ಹಂತದಲ್ಲಿ ಇವೆ ಮತ್ತು ಈ ಹತ್ತಿ ಗಿರಣಿಗೆ ನಿಯೋಜಿತ ಬಂಡವಾಳವನ್ನು ಸರ್ಕಾರದವರು ಹೂಡಿದ್ದಾರೆಯೇ ?

ಶ್ರೀ ಆರ್.ಬಿ. ಪೋತ್‌ದಾರ್ (ಕೈಗಾರಿಕಾ ಸಹಕಾರಗಳ ಸಚಿವರು).—

ಅ) ಕರ್ನಾಟಕ ರಾಜ್ಯದಲ್ಲಿ ನೊಂದಾಯಿಸಿದ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಒಟ್ಟು ೧೮. ಇವುಗಳ ಪೈಕಿ ೭ ಕಾರ್ಯನಿರ್ವಹಿಸುತ್ತಿವೆ.

ಆ) ಸಹಕಾರಿ ಕ್ಷೇತ್ರದಲ್ಲಿ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನೊಳಗೊಂಡಂತೆ ''ಸಹ್ಯಾದ್ರಿ ಸಹಕಾರಿ ನೂಲಿನ ಗಿರಣಿ ನಿಯಮಿತ ಚನ್ನಗಿರಿ'' ಇದು ದಿನಾಂಕ ೧೧-೬-೧೯೮೪ ರಂದು ನೊಂದಾಯಿಸಲ್ಪಟ್ಟಿದೆ.

ಇ) ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇಕಡಾ ೧೦೦ ರಷ್ಟು ರಫ್ತು ಘಟಕ ಯೋಜನೆಯಲ್ಲಿ ತಯಾರಿಸಿದ ನೂಲಿಗೆ ಬೇಡಿಕೆ ಇರುವುದರಿಂದ ರೂ. ೧೫೦೦-೦೦ ಲಕ್ಷಗಳ ವೆಚ್ಚದ ''ಶೇಕಡಾ ೧೦೦ ರಷ್ಟು ರಫ್ತು ಘಟಕ ಯೋಜನೆ'' ಯನ್ವಯ ಗಿರಣಿಯನ್ನು ಆರಂಭಿಸಲು ಪ್ರಸ್ತಾಪ ಬಂದಿದ್ದು ಸರ್ಕಾರ ದಿನಾಂಕ ೧೮-೮-೮೭ರಂದು ಈ ಯೋಜನಾ ರೀತ್ಯಾ ಈ ಗಿರಣಿಗೆ ಲೈಸೆನ್ಸ್ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಯಾವುದೇ ರೀತಿಯ ಬಂಡವಾಳವನ್ನು ಸರ್ಕಾರ ಇಲ್ಲಿಯವರೆಗೆ ಮಾಡಿಲ್ಲ.

ಅಭಾವ ಕಾವಂಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಂದ ಹಣ

೫೭೭. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪-೮೫, ೮೫-೮೬ ಮತ್ತು ೮೬-೮೭ನೇ ಸಾಲಿನಲ್ಲಿ ಅಭಾವ ಪರಿಹಾರ ಕಾವಂಗಾರಿಗಾಗಿ ಬಂದ ಹಣವೆಷ್ಟು ?

ಆ) ಈ ಮೇಲಿನ ವರ್ಷಗಳಲ್ಲಿ ಜಿಲ್ಲಾವಾರು ಖರ್ಚು ಮಾಡಿರುವ ಹಣವೆಷ್ಟು?

ಇ) ಕೇಂದ್ರ ಸರ್ಕಾರದಿಂದ ಹಣವು ಅನುದಾನ ರೂಪದಲ್ಲಿ ಬಂದಿದೆಯೆ ? ಅಥವಾ ಸಾಲದ ರೂಪದಲ್ಲಿ ಬಂದಿದೆಯೆ ? ಎಂಬುದನ್ನು ಸರ್ಕಾರದವರು ತಿಳಿಸುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಕೇಂದ್ರ ಸರ್ಕಾರದಿಂದ ಬಂದ ಹಣದ ವಿವರ ಈ ಕೆಳಗಿನಂತಿದೆ.

ಕೋಟಿ ರೂ.ಗಳಲ್ಲಿ

೧೯೮೪–೮೫	೧೯೮೫–೮೬	೧೯೮೬–೮೭
೩೨.೭೩	೬೨.೪೬	೫೩.೮೨

ಅ) ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಲಕ್ಷ ರೂ.ಗಳಲ್ಲಿ		
		೧೯೮೪–೮೫	೧೯೮೫–೮೬	೧೯೮೬–೮೭
೧	೨	೩	೪	೫
೧	ಬೆಂಗಳೂರು	೧೨೮.೦೦	೪೬೮.೫೨	೨೭೮.೦೮
೨	ಬೆಂಗಳೂರು ಗ್ರಾಮಾ	—	—	—
೩	ಕೋಲಾರ	೮೭.೭೫	೪೮೧.೮೧	೨೮೨.೭೧
೪	ತುಮಕೂರು	೧೩೫.೧೬	೫೧೪.೩೯	೩೪೨.೭೦
೫	ಚಿತ್ರದುರ್ಗ	೨೦೦.೪೯	೪೫೮.೮೯	೨೩೮.೧೪
೬	ಶಿವಮೊಗ್ಗ	೯೭.೧೯	೩೪೫.೮೭	೧೮೩.೬೩
೭	ಮೈಸೂರು	೯೮.೭೫	೪೩೬.೪೩	೨೭೦.೪೦
೮	ಮಂಡ್ಯ	೧೨೫.೩೫	೨೪೫.೪೦	೧೩೨.೩೮
೯	ಚಿಕ್ಕಮಂಗಳೂರು	೬೮.೯೧	೨೬೫.೭೯	೧೬೮.೪೧
೧೦	ಹಾಸನ	೧೨೪.೦೦	೩೯೭.೭೧	೨೨೫.೬೯
೧೧	ಕೊಡಗು	—	೪೯.೬೪	೨೩.೭೬
೧೨	ದಕ್ಷಿಣ ಕನ್ನಡ	—	೩೫.೨೭	೩೬.೪೦
೧೩	ಬೆಳಗಾವಿ	೧೦೦.೫೧	೫೬೪.೧೯	೩೬೫.೬೫
೧೪	ಬಿಜಾಪುರ	೧೨೨.೬೯	೫೬೬.೩೮	೩೭೧.೨೫
೧೫	ಧಾರವಾಡ	೧೭೫.೬೯	೭೪೭.೩೪	೪೭೬.೫೧
೧೬	ಉತ್ತರ ಕನ್ನಡ	—	೧೧೮.೨೫	೧೧೬.೦೦
೧೭	ಗುಲ್ಬರ್ಗಾ	೬೧.೮೭	೬೧೭.೮೩	೪೫೨.೧೫
೧೮	ರಾಯಚೂರು	೨೩೯.೬೨	೫೬೧.೦೪	೩೬೭.೧೫
೧೯	ಬೀದರ್	೧೬೭.೬೨	೨೪೧.೬೪	೧೬೮.೬೨
೨೦	ಬಳ್ಳಾರಿ	೬೨.೦೭	೪೪೨.೭೦	೩೨೭.೫೫

೧	೨	೩	೪	೫
೧)	ಸಿ ಇ ಪಿಹೆಚ್ ಇ	೧೩೯೬.೭೦	(೫೫.೨೫ ರಾಜ್ಯದ ಮಟ್ಟದಲ್ಲಿ)	೪೬೩.೮೦
೨)	ಎಂಡಿ ಕೆಯು ಡಬ್ಲ್ಯೂ ಎಸ್ ಮತ್ತು ಡಿಬಿ	೧೩೯.೦೦	—	೧೧೫.೪೭
೩)	ನಿರ್ದೇಶಕರು ಕೃಷಿ	೨೦೯.೦೦	—	—
೪)	ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ	೧೧೭.೬೫	—	—
೫)	ನಿರ್ದೇಶಕರು ಪಶುಸಂಗೋಪನಾ ಮತ್ತು ಪಶು ವೈದ್ಯ ಇಲಾಖೆ	೪೮.೧೩	—	—
೬)	ನಿರ್ದೇಶಕರು ಬಿಡಬ್ಲ್ಯೂ	೫೦.೫೬	—	—
೭)	ಕರ್ನಾಟಕ ಕೊಳೆಚ ನಿರ್ಮೂಲನಾ ಮಂಡಳಿ	—	—	೨೦.೦೦
	ಒಟ್ಟು	೩೯೮೨.೬೧	೭೬೧೪.೨೪	೫೪೨೬.೭೦

೧) ಕೇಂದ್ರದಿಂದ ಬಂದ ಹಣವು ಅನುದಾನ ಮತ್ತು ಸಾಲದ ರೂಪದಲ್ಲಿರುತ್ತದೆ.

ರಾಜ್ಯದಲ್ಲಿನ ಐ.ಟಿ.ಐಗಳು

೪೨೯. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ೧೯೮೬೮೭ನೇ ವರ್ಷದಲ್ಲಿ ಎಷ್ಟು ಕೈಗಾರಿಕಾ ತರಬೇತಿ ಸಂಸ್ಥೆಗಳು ಕಾರ್ಯಾಚರಣೆಯಲ್ಲಿದ್ದವು ?

ಆ) ಅದರಲ್ಲಿ ತರಬೇತಿ ಹೊಂದಿದವರ ಸಂಖ್ಯೆ ಎಷ್ಟು ?

ಇ) ೧೯೮೭–೮೮ರಲ್ಲಿ ಎಷ್ಟು ಹೊಸ ಸಂಸ್ಥೆಗಳಿಗೆ ಪರವಾನಗಿ ನೀಡಲಾಗಿದೆ?

ಈ) ಎಷ್ಟು ಹಳೆಯ ಸಂಸ್ಥೆಗಳಿಗೆ ಪರವಾನಗಿ ನಿರಾಕರಿಸಲಾಗಿದೆ ? ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಎಸ್. ಕೆ. ಕಾಂತಾ (ಮಾನ್ಯ ಕಾರ್ಮಿಕ ಸಚಿವರು).—

ಅ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು — ೩೩
ಖಾಸಗೀ ಕೈಗಾರಿಕಾ ತರಬೇತಿ ಸಂಸ್ಥೆಗಳು — ೧೭೯

ಒಟ್ಟು — ೨೧೨